<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ತರೀಕೆರೆ</u>

<u>ಸಿ.ಸಿ. ನಂ.427/2017</u>

ದಿನಾಂಕಃ09.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಪಿ.ಡಬ್ಲ್ಯುಃ -6 ಸಿ.ಡಬ್ಲುಃ-14

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ್ |
| ತಂದೆಯ ಹೆಸರು | : | ಆರ್ ನಾಗರಾಜು |
| ವಯಸ್ಸು | : | 42 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ. |
| ವಾಸ | : | ಚಿಕ್ಕಮಗಳೂರು. |

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆ ಃ-</u>**

**<u>ಮುಖ್ಯ ವಿಚಾರಣೆಃ</u>** ಮಾನ್ಯ ಸ ಸ ಅ ರವರಿಂದಃ-

ನಾನು 05-03-2014 ರಿಂದ 17-07-2014 ರವರೆಗೂ ಪಂಚನಹಳ್ಳಿ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ21.05.2014 ರಂದು ನಾನು ಗಸ್ತಿನಿಂದ ಠಾಣೆಗೆ ಮರಳಿ ಬರುತ್ತಿರುವಾಗ ಡಿ.ಹೊಸಹಳ್ಳಿ ಗೇಟ್ ಬಸ್ ನಿಲ್ದಾಣ ಬಳಿ 3 ಜನ ಅಪರಿಚಿತರು ಸಂಶಯಸ್ಪದವಾಗಿ ಒಂದು ಬ್ಯಾಗನ್ನು ಹಿಡಿದುಕೊಂಡು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟಿದ್ದು ನಾವುಗಳು ಅವರನ್ನು ಹಿಡಿದು ವಿಚಾರಣೆ ಮಾಡಿದಾಗ ಅವರು ತಮ್ಮ ಗುರುತಿನ ಬಗ್ಗೆ ಸಮಂಜಸವಾದ ಉತ್ತರವನ್ನು ನೀಡದೇ ಇರುವ ಕಾರಣ ಅವರಲ್ಲಿ ಒಬ್ಬರ ಬಳಿ ಇದ್ದ ಬ್ಯಾಗನ್ನು ಪರೀಶಿಲನೆ ಮಾಡಿ ನೋಡಿದಾಗ ದೇವರಿಗೆ ತೊಡಿಸುವಂತಹ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಕಂಡು ಬಂದಿದ್ದು ಅವುಗಳ ಸತ್ಯಾಸತ್ಯತೆಯನ್ನು ಪರೀಶಿಲಿಸಲು ಚಾಸಾ-6 ರವರನ್ನು ಮತ್ತು ಚಾಸಾ-2 ಮತ್ತು 3 ರವರನ್ನು ಸದರಿ ಸ್ಥಳಕ್ಕೆ ಕರೆಸಿ ಪರೀಶಿಲಿಸಿ ನೋಡಿದಾಗ ಅವುಗಳು ಚಿನ್ನ ಮತ್ತು ಬೆಳ್ಳಿ ಆಭರಣಗಳು ಎಂದು ಕಂಡು ಬಂದಿದ್ದು, ಸದರಿ ಬ್ಯಾಗ್ ಹಿಡಿದಿದ್ದ ಆರೋಪಿತರ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಆರೋಪಿತರು ತಮ್ಮ ಹೆಸರು ಮತ್ತು ವಿಳಾಸವನ್ನು ತಿಳಿಸಿದ್ದು, ನಂತರ ಅವುಗಳನ್ನು ತರೀಕೆರೆ, ಚಿಕ್ಕಮಗಳೂರು, ಅಜ್ಜಂಪುರ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ್ದ ಬಗ್ಗೆ ತಿಳಿಸಿದ್ದು, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬಗ್ಗವಳ್ಳಿ ಗ್ರಾಮದ ಚನ್ನಕೇಶವ ಯೋಗನರಸಿಂಹ ದೇವಾಲಯದ ಬೀಗವನ್ನು ಮುರಿದು 5 ಚಿನ್ನದ ಗುಂಡುಗಳು, 3 ಚಿನ್ನದ ತಾಳಿ ಹಾಗೂ

2 ಬೆಳ್ಳಿಯ ಕಣ್ಣುಗಳನ್ನು ನಾನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಒಟ್ಟು 47 ವಸ್ತುಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ. ಆ ನಂತರ ಠಾಣೆಗೆ ಬಂದು ಆರೋಪಿತರ ವಿರುದ್ದ ನಾನು ಸ್ವ ಪಿರ್ಯಾದಿಯನ್ನು ದಾಖಲು ಮಾಡಿರುತ್ತೇನೆ ಹಾಗೂ ಸದರಿ ಪಿರ್ಯಾದಿಯ ಆಧಾರದ ಮೇಲೆ ನಾನು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೇನೆ.

ಆರೋಪಿತರ ಸ್ವ ಇಚ್ಚೆ ಹೇಳಿಕೆ ಪಡೆದು ಸದರಿಯವರು ತಮ್ಮ ಸ್ವ ಇಚ್ಚ ಹೇಳಿಕೆಯಲ್ಲಿ 5 ನೇ ಆರೋಪಿಯು ಸಹ ಪ್ರಸ್ತುತ ಪ್ರಕರಣದಲ್ಲಿ ಭಾಗಿಯಾರುವ ಬಗ್ಗೆ ನುಡಿದಿದ್ದು, ಅದರ ಆಧಾರದ ಮೇಲೆ ಸದರಿ ಕಳ್ಳತನವಾದ ಸ್ಥಳವು ಅಜ್ಜಂಪುರ ಠಾಣಾ ವ್ಯಾಪ್ತಿಯಲ್ಲಿ ಬರುತ್ತಿದ್ದ ಕಾರಣ ಸದರಿ ಸಂಬಂಧಪಟ್ಟ ಮುದ್ದೆ ಮಾಲುಗಳನ್ನು ವರ್ಗಾವಣೆ ಕೊಟ್ಟಿರುತ್ತೇನೆ.

ಸಾಕ್ಷಿ ಮು.ಮಾ-1 ರಿಂದ 3 ಅನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಸ್ವ ಪಿರ್ಯಾದಿ ಆಗಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.5 (ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಅಮಾನತು ಪಂಚನಾಮೆ ಆಗಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

( ಸಂತೋಷ ಕುಮಾರ್ ಪಿ ಎಸ್)
ಸಿವಿಲ್ ನ್ಯಾಯಾಧೀಶರು ಮತ್ತು
ಹೆ.ಪ್ರ:ದ:ನ್ಯಾ:ದಂ.,ರವರು, ತರೀಕೆರೆ.